# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.4189/2015

**ಬಹುಮಹಡಿಗಳ ಕಟ್ಟಡ,**
**ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,**
**ಬೆಂಗಳೂರು, ದಿನಾಂಕ: 03/06/2019**

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಸಂಚಾರಿ ನಿಯಮವನ್ನು ಉಲ್ಲಂಘಿಸಿದ್ದ ವಾಹನಗಳ ವಿರುದ್ಧ ಅವುಗಳ ಪರವಾನಿಗೆ ರದ್ದುಪಡಿಸುವ ಬಗ್ಗೆ ಮತ್ತು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿ, ನ್ಯಾಯಾಲಯದಲ್ಲಿ ದಂಡ ಪಾವತಿಸಲು ಕ್ರಮಕೈಗೊಂಡ ಬಗ್ಗೆ ಅಂತಿಮ ವರದಿ ಸಲ್ಲಿಸಲು ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ಶಾಮಣ್ಣ, ಪಿಬಿ ನಂ.156, ಅಶೋಕನಗರ, ತುಮಕೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಅವರು, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಅವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಮಂಗಳೂರಿನಿಂದ ಪುತ್ತೂರು, ಧರ್ಮಸ್ಥಳ, ವಿಟ್ಲ, ಉಪ್ಪಿನಂಗಡಿ ಮಾರ್ಗವಾಗಿ ಖಾಸಗಿ ವಾಹನಗಳು ಅನಧಿಕೃತವಾಗಿ ಪರವಾನಿಗೆಯ ನಿಯಮಗಳನ್ನು ಉಲ್ಲಂಘಿಸಿ ರಾಷ್ಟ್ರೀಕೃತ ಮಾರ್ಗಗಳಲ್ಲಿ ಕಾಂಟ್ರಾಕ್ಟ್ ಕ್ಯಾರಿಯೇಜಿಗೆ ಬದಲಾಗಿ ಮಜಲು ಸಾರಿಗೆ ವಾಹನದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಹಲವಾರು ಬಾರಿ ದೂರು ನೀಡಿದ್ದರೂ, ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

3. ದೂರಿನ ಜೊತೆಗೆ ವಾಹನಗಳ ಸಂಖ್ಯೆಗಳುಳ್ಳ ಪಟ್ಟಿ, ದಿ.14.10.2015ರಂದು ಮಂಗಳೂರು ಕೆ.ಎಸ್.ಆರ್.ಟಿ.ಸಿ.ಯ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಹಾಗೂ ಉಪಲೋಕಾಯುಕ್ತರಿಗೆ ಬರೆದ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ವಿಚಾರವಾಗಿ ಜಂಟಿ ಸಾರಿಗೆ ಆಯುಕ್ತರು, ಶಿವಮೊಗ್ಗ ವಿಭಾಗ ಇವರಿಗೆ ವಿಶೇಷ ತಂಡವನ್ನು ಕಳುಹಿಸಲು ಕೋರಿದಂತೆ ವಿಶೇಷ ತಂಡವು ಚಿತ್ರದುರ್ಗದಿಂದ ಆಗಮಿಸಿ ಕಾರ್ಯಾಚರಣೆ ನಡೆಸಿರುತ್ತದೆ. ದೂರಿನ ವಿಚಾರವು ಆರ್.ಟಿ.ಒ. ಪುತ್ತೂರು, ಅವರ ವ್ಯಾಪ್ತಿಗೊಳಪಡುತ್ತಿದ್ದು, ಅವರ ವ್ಯಾಪ್ತಿಯಲ್ಲಿ ಅನಧಿಕೃತ ಕಾಂಟ್ರಾಕ್ಟ್ ಕ್ಯಾರೇಜ್ ಓಡಾಟದ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಕೋರಲಾಗಿರುತ್ತದೆ. ಈ ಬಗ್ಗೆ ಎಲ್ಲಾ ಮೋಟಾರು ವಾಹನ ನಿರೀಕ್ಷಕರಿಗೆ ಹಾಗೂ ಹಿರಿಯ ಮೋಟಾರು ವಾಹನ ನಿರೀಕ್ಷಕರಿಗೆ ಆದೇಶಿಸಲಾಗಿದೆ. ಅದರಂತೆ ತಪಾಸಣಾ ಸಮಯದಲ್ಲಿ ಕಂಡು ಬಂದ ಒಟ್ಟು 30 ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳ ಓಡಾಟಕ್ಕೆ ತಡೆ ನೀಡಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದ್ದು, ನ್ಯಾಯಾಲಯದಲ್ಲಿ ದಂಡ ಪಾವತಿಸಿದ ನಂತರ ವಾಹನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ರಹದಾರಿ ಬಗ್ಗೆ ಕ್ರಮ ಜರುಗಿಸಲು ತನಿಖಾ ವರದಿಗಳನ್ನು ಕಾರ್ಯದರ್ಶಿಗಳು, ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು, ಅವರಿಗೆ ಕಳುಹಿಸಲಾಗಿರುತ್ತದೆ. ಕಾಂಟ್ರಾಕ್ಟ್ ಕ್ಯಾರೇಜ್ ಬಸ್ ಗಳಿಗೆ ಪರವಾನಿಗೆಯನ್ನು ನೀಡುವ ಅಧಿಕಾರವು ಕರ್ನಾಟಕ ಸಾರಿಗೆ ಪ್ರಾಧಿಕಾರಕ್ಕೆ ಇರುತ್ತದೆ. 2008ರಿಂದ ಒಟ್ಟು 743 ವಾಹನಗಳ ಮೇಲೆ ಪ್ರಕರಣ ದಾಖಲಿಸಿ ವರದಿ ಮಾಡಲಾಗಿರುತ್ತದೆ. ಆದ್ದರಿಂದ ತಾವು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲವೆಂದು ಪ್ರಕರಣವನ್ನು ಮುಕ್ತಾಯ ಗೊಳಿಸಬೇಕೆಂದು ಕೋರಿರುತ್ತಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

6. ಈ ಪ್ರಕರಣದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ಮಂಗಳೂರಿನಿಂದ ಪುತ್ತೂರು, ಧರ್ಮಸ್ಥಳ, ವಿಟ್ಲ, ಉಪ್ಪಿನಂಗಡಿ ಮಾರ್ಗವಾಗಿ ಖಾಸಗಿ ವಾಹನಗಳು ಅನಧಿಕೃತವಾಗಿ ಪರವಾನಿಗೆಯ ನಿಯಮಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಹಲವಾರು ಬಾರಿ ದೂರು ನೀಡಿದ್ದರೂ ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದಂತೆ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ, 2008ರಿಂದ ಒಟ್ಟು 743 ವಾಹನಗಳ ಮೇಲೆ ಪ್ರಕರಣ ದಾಖಲಿಸಿರುವುದಾಗಿ ಹೇಳಿ ಸದರಿ 743 ವಾಹನಗಳ ಪಟ್ಟಿಯನ್ನು ಲಗತ್ತಿಸಿರುತ್ತಾರೆ. ಸದರಿ ಪಟ್ಟಿಯನ್ನು ನಿಶಾನೆ-'ಎ' ಎಂದು ಗುರುತಿಸಿದೆ. ಈಗಾಗಲೇ ಒಟ್ಟು 30 ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳ ಓಡಾಟಕ್ಕೆ ತಡೆ ನೀಡಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿ, ನ್ಯಾಯಾಲಯದಲ್ಲಿ ದಂಡ ಪಾವತಿಸಿದ ನಂತರ ವಾಹನಗಳನ್ನು ಬಿಡುಗಡೆ

ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ವಾಹನಗಳ ಪಟ್ಟಿಯನ್ನು 'ಬಿ' ಎಂದು ಗುರುತಿಸಿದೆ. ಒಟ್ಟು 743 ವಾಹನಗಳ ಪೈಕಿ 30 ವಾಹನಗಳಿಂದ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿ, ನ್ಯಾಯಾಲಯದಲ್ಲಿ ದಂಡ ವಸೂಲಿ ಮಾಡಿರುವುದಾಗಿ ಹೇಳಿರುತ್ತಾರೆ.

7. ಪ್ರಸ್ತುತ ದೂರಿನಲ್ಲಿ, ಕಾಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳು ಪರ್ಮಿಟ್ ಉಲ್ಲಂಘಿಸಿ ಮಜಲು ವಾಹನಗಳ ರೀತಿಯಲ್ಲಿ ಓಡಾಡುತ್ತಿವೆಯೆಂದು ಆಪಾದಿಸಿರುತ್ತಾರೆ. ಮೋಟಾರು ವಾಹನಗಳ ಕಾಯ್ದೆ 1988ರ ಸೆಕ್ಷನ್ 2(7) ಪ್ರಕಾರ ಕಾಂಟ್ರಾಕ್ಟ್ ಕ್ಯಾರೇಜ್ ವಾಹನಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಕರನ್ನು ಸಾಗಿಸಬೇಕಾಗುತ್ತದೆ. ಪ್ರಯಾಣದ ಅವಧಿಯಲ್ಲಿ ಎಲ್ಲಿಯೇ ಆಗಲೀ ಕರಾರಿನಲ್ಲಿ ಸೇರಿಸಿಲ್ಲದ ಪ್ರಯಾಣಿಕರನ್ನು ಮಧ್ಯದಲ್ಲಿ ಹತ್ತಿಸಿಕೊಳ್ಳಲು ಅಥವಾ ಇಳಿಸಲು ಅವಕಾಶವಿರುವುದಿಲ್ಲ.

8. ಮೋಟಾರು ವಾಹನಗಳ ಕಾಯ್ದೆ 1988ರ ಸೆಕ್ಷನ್ 66ರ ಪ್ರಕಾರ ಮೋಟಾರು ವಾಹನಗಳನ್ನು ಪರ್ಮಿಟ್‌ನಲ್ಲಿ ವಿಧಿಸಿದ ಷರತ್ತುಗಳಿಗೆ ವಿರುದ್ಧವಾಗಿ ಬಳಸಲು ಅವಕಾಶವಿರುವುದಿಲ್ಲ. ಕಾಂಟ್ರಾಕ್ಟ್ ಕ್ಯಾರೇಜ್ ವಾಹನಗಳ ಮಾಲೀಕರು ರಸ್ತೆಯಲ್ಲಿ ವಾಹನವನ್ನು ಓಡಾಡಿಸಲು ಮೋಟಾರು ವಾಹನಗಳ ಕಾಯ್ದೆ 1988ರ ಸೆಕ್ಷನ್ 73ರಲ್ಲಿ ಪರವಾನಿಗೆ ಪಡೆಯಲು, ಅರ್ಜಿ ಸಲ್ಲಿಸಿ, ಅರ್ಜಿಯ ಜೊತೆಗೆ ತಮ್ಮ ವಾಹನ ಯಾವ ಕ್ಷೇತ್ರಕ್ಕೆ ಅವಶ್ಯವಾಗಿದೆ ಎನ್ನುವ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. ನಂತರ ಕಲಂ.74ರಡಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮಾಲೀಕರ ಪರವಾನಿಗೆ ಅರ್ಜಿಗೆ ಅನುಸಾರವಾಗಿ ಅಥವಾ ತಾನು ಸೂಕ್ತವೆಂದು ಭಾವಿಸುವಂತೆ ಮಾರ್ಪಾಟು ಮಾಡಿ ಕಾಂಟ್ರಾಕ್ಟ್ ಕ್ಯಾರೇಜ್ ವಾಹನದ ಪರ್ಮಿಟ್ ನೀಡಬಹುದು ಅಥವಾ ಅಂತಹ ಪರ್ಮಿಟನ್ನು ನೀಡಲು ನಿರಾಕರಿಸಬಹುದು. ಕಲಂ.74 ಪ್ರಕಾರ ಪ್ರಾದೇಶಿಕಸಾರಿಗೆ ಪ್ರಾಧಿಕಾರವು ಕಾಂಟ್ರಾಕ್ಟ್ ಕ್ಯಾರೇಜ್ ಪರ್ಮಿಟನ್ನು . ನೀಡುವಾಗ ಷರತ್ತುಗಳನ್ನು ವಿಧಿಸಿ ಪರ್ಮಿಟ್ ನೀಡಿರುತ್ತದೆ. ಸದರಿ ಷರತ್ತುಗಳಲ್ಲಿ ವಾಹನಗಳನ್ನು ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ನಿರ್ದಿಷ್ಟ ಮಾರ್ಗ/ಗಳಲ್ಲಿ ಮಾತ್ರ ಉಪಯೋಗಿಸತಕ್ಕದೆಂದು ಇರುತ್ತದೆ. ಆದ್ದರಿಂದ ಕಾಂಟ್ರಾಕ್ಟ್ ಕ್ಯಾರೇಜ್ ವಾಹನಗಳು ನಿರ್ದಿಷ್ಟ ಮಾರ್ಗದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಕರನ್ನು ಸಾಗಿಸಬೇಕಾಗುತ್ತದೆ. ಆದರೆ ಸದರಿ ವಾಹನಗಳು ಎರಡು ಸ್ಥಳಗಳ ಮಧ್ಯದಲ್ಲಿ ಯಾವುದೇ ಪ್ರಯಾಣಿಕರನ್ನು ಹತ್ತಿಸುವುದಾಗಲೀ ಅಥವಾ ಇಳಿಸುವುದಾಗಲೀ ಮಾಡತಕ್ಕದ್ದಲ್ಲ. ಸದರಿ ಷರತ್ತನ್ನು ಉಲ್ಲಂಘಿಸಿದರೆ ಕಲಂ.86 ಅಡಿ ಸಕ್ಷಮ ಪ್ರಾಧಿಕಾರಕ್ಕೆ ಕ್ರಮಕೈಗೊಳ್ಳಲು ಅವಕಾಶವಿರುತ್ತದೆ.

9. ಕಲಂ 86 ಈ ಕೆಳಕಂಡಂತಿರುತ್ತದೆ.

*" ಕಲಂ.86 : ಪರ್ಮಿಟ್ ಗಳ ರದ್ಧಿಯಾತಿ ಮತ್ತು ಅಮಾನತ್ತು:*
*(1) ಪರ್ಮಿಟನ್ನು ನೀಡುವ ಸಾರಿಗೆ ಪ್ರಾಧಿಕಾರವು,-*
*ಎ) 84ನೇ ಕಲಂನಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಷರತ್ತನ್ನು ಅಥವಾ ಪರ್ಮಿಟ್ ನಲ್ಲಿರುವ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ: ಅಥವಾ*
*ಬಿ) ಪರ್ಮಿಟ್‌ಧಾರಕನು ಪರ್ಮಿಟ್ ನಿಂದ ಅಧಿಕೃತಗೊಳಿಸಿದ ಯಾವುದೇ ರೀತಿಯಲ್ಲಿ ವಾಹವನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸುವಂತೆ ಮಾಡಿದರೆ ಅಥವಾ ಉಪಯೋಗಿಸಲು ಅವಕಾಶಕೊಟ್ಟರೆ;*

*.......*

*-- ಪರ್ಮಿಟನ್ನು ರದ್ದುಗೊಳಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವಂತಹ ಅವಧಿಗೆ ಅಮಾನತ್ತುಗೊಳಿಸಬಹುದು,*
*ಪರಂತು,ಪರ್ಮಿಟ್ ಧಾರಕನಿಗೆ,ಅವನ ವಿವರಣೆಯನ್ನು ಒದಗಿಸಲು ಅವಕಾಶವನ್ನು ಕೊಟ್ಟ ಹೊರತು ಯಾವುದೇ ಪರ್ಮಿಟನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತ್ತುಗೊಳಿಸತಕ್ಕದ್ದಲ್ಲ."*

10. ಕಲಂ.192-ಎ ಈ ಕೆಳಕಂಡಂತಿರುತ್ತದೆ.

" ಪರ್ಮಿಟ್ ಇಲ್ಲದ ವಾಹನವನ್ನು ಬಳಸುವುದು-(1) 66ನೇ ಕಲಂ.(1)ನೇ ಉಪಕಲಂದ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ ಯಾವ ಮಾರ್ಗದ ಮೇಲೆ ಅಥವಾ ಯಾವ ಮಾರ್ಗಗಳ ಮೇಲೆ ಅಥವಾ ಯಾವ ಪ್ರದೇಶಗಳಲ್ಲಿ ಅಥವಾ ಯಾವ ಉದ್ದೇಶಕ್ಕಾಗಿ ವಾಹವನ್ನು ಬಳಸಬಹುದೋ ಅವುಗಳಿಗೆ ಸಂಬಂಧಪಟ್ಟ ಪರ್ಮಿಟ್ಟಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ಮೋಟಾರ್ ವಾಹನವನ್ನು ಚಾಲನೆ ಮಾಡುವ ಅಥವಾ ಬಳಸುವಂತೆಮಾಡುವ ಅಥವಾ ಅದಕ್ಕೆ ಅವಕಾಶನೀಡುವ ಯಾರೇ ವ್ಯಕ್ತಿಯು ಮೊದಲ ಅಪರಾಧಕ್ಕೆ 5000- ರೂ.ಗಳವರೆಗೆ ವಿಸ್ತರಿಸಬಹುದಾದ ಆದರೆ 2000/-ಗಳಿಗೆ ಕಡಿಮೆಯಾಗತಕ್ಕದಲ್ಲದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕೆ 1 ವರ್ಷದವರೆಗೆ ವಿಸ್ತರಿಸಬಹುದಾದ ಆದರೆ 3 ತಿಂಗಳಿಗೆ ಕಡಿಮೆಯಾಗತಕ್ಕದಲ್ಲದ ಕಾರಾಗ್ರಹ ವಾಸ ಅಥವಾ ರೂ. 10,000/-ವರೆಗೆ ವಿಸ್ತರಿಸಬಹುದಾದ ಆದರೆ 5000/-ಗಳಿಗೆ ಕಡಿಮೆಯಿಲ್ಲದ ಜುಲ್ಮಾನೆ ಅಥವಾ ಅವರಡರಿಂದಲೂ ದಂಡನೀಯವಾಗತಕ್ಕದ್ದು.
ಪರಂತು ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ಅದಕ್ಕಿಂತ ಕಡಿಮೆ ದಂಡನೆ ವಿಧಿಸಬಹುದು.

11. ಕಲಂ.207 ಈ ಕೆಳಕಂಡಂತಿರುತ್ತದೆ.

*ನೋಂದಣಿ ಪ್ರಮಾಣಪತ್ರ, ಪರ್ಮಿಟ್ ಇತ್ಯಾದಿಗಳು ಇಲ್ಲದೆ ಉಪಯೋಗಿಸಲಾದ ವಾಹನಗಳನ್ನು ತಡೆಹಿಡಿದಿಡುವ ಅಧಿಕಾರ- (1)ಪೋಲೀಸ್ ಅಧಿಕಾರಿ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಗೆ ಮೋಟಾರ್ ವಾಹನವನ್ನು 3ನೇ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 39ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಥವಾ 66ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದ ಪರ್ಮಿಟ್ ಇಲ್ಲದೆ ಅಥವಾ ವಾಹನವನ್ನು ಯಾವ ಮಾರ್ಗದಲ್ಲಿ ಅಥವಾ ಯಾವ ಪ್ರದೇಶದಲ್ಲಿ ಅಥವಾ ಯಾವ ಉದ್ದೇಶಕ್ಕಾಗಿ ಉಪಯೋಗಿಸಬಹುದೆಂಬುದಕ್ಕೆ ಸಂಬಂಧಿಸಿದಂತೆ ಪರ್ಮಿಟ್ ನಲ್ಲಿರುವ ಯಾವುದೇ ಷರತ್ತನ್ನು ಉಲ್ಲಂಘಿಸಿ ಬಳಸಲಾಗಿದೆ ಅಥವಾ ಬಳಸಲಾಗುತ್ತಿದೆಯೆಂದು ನಂಬಲು ಕಾರಣವಿದ್ದರೆ, ಅವನು ಆ ವಾಹನವನ್ನು ವಶಪಡಿಸಿಕೊಳ್ಳಬಹುದು ಮತ್ತು ನಿಯಮಿಸಿದ ರೀತಿಯಲ್ಲಿ ತಡೆಹಿಡಿದಿಡಬಹುದು ಮತ್ತು ಈ ಉದ್ದೇಶಕ್ಕಾಗಿ ಅಥವಾ ವಾಹನದ ತಾತ್ಕಾಲಿಕ ಸುರಕ್ಷಿತ ಅಭಿರಕ್ಷೆಗಾಗಿ ತಾನು ಯುಕ್ತವೆಂದು ಪರ್ಯಾಲೋಚಿಸಬಹುದಾದ ಅಥವಾ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ಮಾಡಬಹುದು."*

12. ಪ್ರಸ್ತುತ ಪ್ರಕರಣದಲ್ಲಿ ಮೋಟಾರು ವಾಹನಗಳ ಕಾಯ್ದೆಯ ಪ್ರಕಾರ ಸಾರಿಗೆ ಪ್ರಾಧಿಕಾರಕ್ಕೆ ಪರ್ಮಿಟ್ ಉಲ್ಲಂಘಿಸಿ ಓಡಿಸುತ್ತಿರುವ ವಾಹನಗಳನ್ನು ತಡೆಹಿಡಿದು ಅವುಗಳ ಪರವಾನಿಗೆಯನ್ನು ರದ್ದುಪಡಿಸಲು ಅಥವಾ ದಂಡವಿಧಿಸಲು ಕಲಂ.86ರಲ್ಲಿ ಅವಕಾಶವಿರುತ್ತದೆ. ಅಲ್ಲದೆ ಅಂತಹ ವಾಹನಗಳ ವಿರುದ್ಧ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಕ್ರಮಕೈಗೊಳ್ಳಲು ಅವಕಾಶವಿರುತ್ತದೆ. ಪ್ರಸ್ತುತ ದೂರಿನಲ್ಲಿ ಮಂಗಳೂರು ಸಾರಿಗೆ ಪ್ರಾಧಿಕಾರವು 2008ರಿಂದ 2015ರವರೆಗೆ ಒಟ್ಟು 743 ವಾಹನಗಳ ಮೇಲೆ ಪ್ರಕರಣ ದಾಖಲಿಸಿರುತ್ತಾರೆಂದು ತಾವು ಸಲ್ಲಿಸಿದ ಪಟ್ಟಿಯಲ್ಲಿ ತಿಳಿಸಿರುತ್ತಾರೆ. ಅವುಗಳ ಪೈಕಿ 30 ವಾಹನಗಳ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರಿಂದ, ನ್ಯಾಯಾಲಯದಲ್ಲಿ ದಂಡ ಪಾವತಿಸಲು ಕ್ರಮಕೈಗೊಂಡಿರುವುದಾಗಿ ತಿಳಿಸಿರುತ್ತಾರೆ. ಉಳಿದ 713 ವಾಹನಗಳ ವಿರುದ್ಧ ಕ್ರಮ ಕೈಗೊಂಡಿರುವುದು ಕಂಡುಬರುವುದಿಲ್ಲ.

13. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಸಂಚಾರಿ ನಿಯಮವನ್ನು ಉಲ್ಲಂಘಿಸಿದ್ದ 713 ವಾಹನಗಳ ವಿರುದ್ಧ ಅವುಗಳ ಪರವಾನಿಗೆ ರದ್ದುಪಡಿಸುವ ಬಗ್ಗೆ ಮತ್ತು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿ, ನ್ಯಾಯಾಲಯದಲ್ಲಿ

ದಂಡ ಪಾವತಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿ, ನಿರ್ದೇಶಿಸಲು ಕೋರಲಾಗಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.